ಕಾರ್ಯಪಾಲಕ ಅಭಿಯಂತರರ ಕಛೇರಿ
ನಂ.2ನೇ ಕಟ್ಟಡಗಳ ವಿಭಾಗ,
ಲೋಇ ಅನೆಕ್ಸ್ ಕಟ್ಟಡ, 1ನೇ ಮಹಡಿ,
ಕೆ.ಆರ್. ವೃತ್ತ, ಬೆಂಗಳೂರು 01.

ದೂರವಾಣಿ : 080-22122856
ಫ್ಯಾಕ್ಸ್ : 080-22123368
ಇ ಮೇಲ್: eebldno2@gmail.com

(ಲೋಕೋಪಯೋಗಿ ಇಲಾಖೆ)

ಸಂಖ್ಯೆ:ಕಾನಿಇಂ:ಕವಿ2:ಸ.ಇಂ-3:2025-26/6423 ದಿನಾಂಕ: 17/3/26

ಇವರಿಗೆ:

ರಾಯಲ್ ಕಾನ್‌ಕಾರ್ಡ್ ಇಂಟರ್‌ನ್ಯಾಷನಲ್ ಸ್ಕೂಲ್,
ರಾಯಲ್ ಕಾನ್‌ಕಾಡ್ ಎಜುಕೇಷನ್ ಟ್ರಸ್ಟ್,
6ನೇ "ಬಿ" ಮುಖ್ಯ ರಸ್ತೆ ಚೇಳಕೆರೆ,
ಕಲ್ಯಾಣನಗರ, ಹೆಚ್.ಆರ್.ಬಿ.ಆರ್ ಲೇಔಟ್,
ಬೆಂಗಳೂರು-560043.

ಮಾನ್ಯರೆ,

ವಿಷಯ: ರಾಯಲ್ ಕಾನ್‌ಕಾಡ್ ಎಜುಕೇಷನ್ ಟ್ರಸ್ಟ್ ವತಿಯಿಂದ ನಡೆಸುತ್ತಿರುವ ರಾಯಲ್ ಕಾನ್‌ಕಾರ್ಡ್ ಇಂಟರ್‌ನ್ಯಾಷನಲ್ ಸ್ಕೂಲ್, 6ನೇ "ಬಿ" ಮುಖ್ಯ ರಸ್ತೆ ಚೇಳಕೆರೆ, ಕಲ್ಯಾಣನಗರ, ಹೆಚ್.ಆರ್.ಬಿ.ಆರ್ ಲೇಔಟ್, ಬೆಂಗಳೂರು-560043 ಶಾಲೆಯ ಕಟ್ಟಡಕ್ಕೆ ಸ್ಥಿರತೆಯ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ 1) ಕರ್ನಾಟಕ ಸರ್ಕಾರದ ಸಚಿವಾಲಯ ವಿಕಾಸ ಸೌಧ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಲೋ.ಇ.59. ಬಿಇಡಿ 2019 ದಿ:06-05-2022.
2) ತಮ್ಮ ಮನವಿ ಪತ್ರದ ದಿ:25-02-2026
3) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.6ನೇ ಕಟ್ಟಡಗಳ ಉಪ ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ:1665/2025-26, ದಿ: 13-03-2026

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಯಲ್ ಕಾನ್‌ಕಾಡ್ ಎಜುಕೇಷನ್ ಟ್ರಸ್ಟ್ ವತಿಯಿಂದ ನಡೆಸುತ್ತಿರುವ ರಾಯಲ್ ಕಾನ್‌ಕಾರ್ಡ್ ಇಂಟರ್‌ನ್ಯಾಷನಲ್ ಸ್ಕೂಲ್, 6ನೇ "ಬಿ" ಮುಖ್ಯ ರಸ್ತೆ ಚೇಳಕೆರೆ, ಕಲ್ಯಾಣನಗರ, ಹೆಚ್.ಆರ್.ಬಿ.ಆರ್ ಲೇಔಟ್, ಬೆಂಗಳೂರು-560043 ಶಾಲೆಯ ಕಟ್ಟಡಕ್ಕೆ ಸ್ಥಿರತೆಯ ಪ್ರಮಾಣ ಪತ್ರವನ್ನು ನೀಡುವಂತೆ ಉಲ್ಲೇಖಿತ ಪತ್ರ (2)ರಲ್ಲಿ ಕೋರಿರುತ್ತಾರೆ.

ಉಲ್ಲೇಖ (3)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.6ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರು ಕಟ್ಟಡವನ್ನು ದಿನಾಂಕ: 06-03-2026ರಂದು ಶಾಲಾ ಸಿಬ್ಬಂದಿಯವರ ಸಮ್ಮುಖದಲ್ಲಿ ಸ್ಥಳ ಪರಿವೀಕ್ಷಣೆ ಕೈಗೊಂಡು ಸದರಿ ಕಟ್ಟಡದ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿವೀಕ್ಷಿಸಲಾಯಿತು. ಈ ಸಮಯದಲ್ಲಿ ಮೇಲ್ನೋಟಕ್ಕೆ ಕಟ್ಟಡವು ಸದೃಢವಾಗಿದೆ ಎಂದು ಅಭಿಪ್ರಾಯಿಸಲಾಯಿತು. ಸದರಿ ಕಟ್ಟಡವನ್ನು ನಿರ್ವಹಣೆ ಮಾಡುವ ಜವಾಬ್ದಾರಿಯು ಸದರಿ ಸಂಸ್ಥೆಯವರದ್ದಾಗಿರುತ್ತದೆ. ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯನ್ವಯ ಹಾಗೂ ಉಲ್ಲೇಖ (3)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿವೀಕ್ಷಿಸಿ ಶಿಫಾರಸ್ಸು ಮಾಡಿರುವ ಹಿನ್ನಲೆಯಲ್ಲಿ ಈ ಕೆಳಕಂಡ ಷರತ್ತುಗಳನ್ನೊಳಪಟ್ಟು ಸದರಿ ಕಟ್ಟಡವು "STRUCTURALLY STABLE" ಎಂದು ಪರಿಗಣಿಸಿ ನಿರಾಕ್ಷೇಪಣಾ ಪತ್ರವನ್ನು ದಿನಾಂಕ:17-03-2026 ರಿಂದ 16-03-2027 ರವರೆಗೆ ನೀಡಲಾಗಿದೆ.

1) ಸದರಿ ಕಟ್ಟಡವನ್ನು ನಿರ್ವಹಣೆ ಮಾಡುವ ಜವಾಬ್ದಾರಿಯು ಸದರಿ ಸಂಸ್ಥೆಯವರದಾಗಿರುತ್ತದೆ.
2) ಅಗ್ನಿ ಶಾಮಕ ಇಲಾಖೆಯಿಂದ ಅಗ್ನಿ ಸುರಕ್ಷತಾ ಪ್ರಮಾಣ ಪತ್ರ (Fire Safety Compliance) ಮತ್ತು ಇತರೆ ಅವಶ್ಯಕ ಅನುಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
3) ಕಟ್ಟಡವನ್ನು ಕಾಲಕಾಲಕ್ಕೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನೆ ಬಳಸಿ ತಜ್ಞರಿಂದ ವ್ಯವಸ್ಥಿತವಾಗಿ ವಾರ್ಷಿಕ ನಿರ್ವಹಣೆ ಮಾಡತಕ್ಕದ್ದು.

4) ವಿದ್ಯಾರ್ಥಿಗಳ, ಸಿಬ್ಬಂದಿಗಳ ಹಾಗೂ ಶಿಕ್ಷಕರ ಸುರಕ್ಷತೆಗೆ ಸಕಲ ವ್ಯವಸ್ಥೆಯನ್ನು ನೀಡಿ ಸೂಕ್ತ ಸುರಕ್ಷತಾ ವ್ಯವಸ್ಥೆಯನ್ನು ನಿಯಮಾನುಸಾರ ಅಳವಡಿಸತಕ್ಕದ್ದು.

5) ಕಟ್ಟಡದ ಸಧೃಡತೆಗೆ ಧಕ್ಕೆಯಾಗುವಂತಹ ಯಾವುದೇ ಇತರೆ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೊಳ್ಳತಕ್ಕದಲ್ಲ.

6) ಮುಂದಿನ ದಿನಗಳಲ್ಲಿ ಕಟ್ಟಡದ ಯಾವುದಾದರು ಬದಲಾವಣೆ ಅಥವಾ ನಿರ್ಮಾಣವನ್ನು ಸಂಬಂಧಪಟ್ಟ ಪ್ರಾಧಿಕಾರದ ಅನುಮತಿ ಇಲ್ಲದೆ ಮಾಡಿದ್ದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುತ್ತದೆ.

7) ಕುಡಿಯುವ ನೀರು ಹಾಗೂ ಶೌಚಾಲಯಗಳಲ್ಲಿ ಸದಾ ಸ್ವಚ್ಛತೆಯನ್ನು ಕಾಪಾಡಿಕೊಳ್ಳತಕ್ಕದ್ದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ ಕಾಲೇಜಿಗೆ ಸಂಬಂಧಿಸಿದ ಎಲ್ಲಾ ನಿರ್ದೇಶನ ಹಾಗೂ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.